ಶ್ರೀ ಜೆ. ರಾಜುಗೌಡ.—ಈ ಸಣ್ಣ ಉಳಿತಾಯದಲ್ಲಿ ಆರ್ಥಿಕ ಸಂಪನ್ಮೂಲಗಳಿಂದ ಅತ್ಯಾಕರ್ಷಕವಾದ ಬಡ್ಡಿ ಮತ್ತು ಆದಾಯ ತೆರಿಗೆ ವಸೂಲು ಮಾಡಲಿಕ್ಕೆ ತಾವು ಏನಾದರೂ ಕಾರ್ಯಕ್ರಮವನ್ನು ಜಾರಿಗೆ ತರಲಿಕ್ಕೆ ಶಿಫಾರಸ್ಸು ಮಾಡುತ್ತೀರಾ? ಮತ್ತು ಸಣ್ಣ ಉಳಿತಾಯದಿಂದ ರಾಜ್ಯಕ್ಕೆ ಬರತಕ್ಕಂಥ ಪಾಲಿನಿಂದ ಈ ವರ್ಷ ಆಯವ್ಯಯದ ಕೊರತೆಯನ್ನು ಎಷ್ಟರ ಮಟ್ಟಿಗೆ ನೀಗಿಸಂವುದಕ್ಕೆ ಸಾಧ್ಯವಾಗುತ್ತದೆ, ತಿಳಿಸುತ್ತೀರಾ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಈ ಸಣ್ಣ ಉಳಿತಾಯದ ಯೋಜನೆಯಲ್ಲಿ ಹಣವನ್ನು ತೊಡಗಿಸುವುದರಿಂದ ಯಾವುದೇ ಬ್ಯಾಂಕಿನಲ್ಲಿ ಕೊಡದೇ ಇರತಕ್ಕಂಥ ಹೆಚ್ಚು ಬಡ್ಡಿ ಕೊಡುತ್ತಾರೆ. ಈ ಒಂದು ಹೊಸ ಯೋಜನೆಯನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಅದು ಇಂದಿರಾ ವಿಕಾಸ ಪತ್ರ. ಅದರಲ್ಲಿ ೨೦ ಪರ್‌ಸೆಂಟ್ ಸಿಂಪಲ್ ಇಂಟರೆಸ್ಟ್ ಬಡ್ಡಿ ಕೊಡತಕ್ಕಂಥದ್ದು ಇದೆ ಮತ್ತು "ಮಾನ್ಯ ಸದಸ್ಯರು ಹೇಳುವಂಥ ಮಾತು ಈ ದಿವಸ ಬಹಳ ಜಾಸ್ತಿ ಸಂಖ್ಯೆಯಲ್ಲಿ ಸದಸ್ಯರಿದ್ದಾರೆ. ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ, ನನ್ನ ಮನುವಿಗೆ ಓಗೊಟ್ಟು ಪ್ರತಿಯೊಬ್ಬರೂ ರೆಕರಿಂಗ್ ಡಿಪಾಸಿಟ್‌ನ್ನು ಇಟ್ಟಿದ್ದಾರೆ. ಇಡೀ ಭಾರತ ದೇಶದಲ್ಲಿ ವಿಧಾನಸಭೆಯ ಸದಸ್ಯರಂ ಸಣ್ಣ ಉಳಿತಾಯವನ್ನು ಮಾಡಿದ್ದಾರೆ. ನಾನು ಪುನಃ ಅವರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಐದು ವರ್ಷದಲ್ಲಿ ಯಾವುದೇ ಬ್ಯಾಂಕಿನಲ್ಲಿ ಹತ್ತು ಸಾವಿರ ರೂಪಾಯಿಗಳಿಗೆ ಇಪ್ಪತ್ತು ಸಾವಿರ ರೂಪಾಯಿ ಕೊಡಕ್ಕಂಥ ವ್ಯವಸ್ಥೆ ಎಲ್ಲಿಯೂ ಇಲ್ಲ ಮಾನ್ಯ ಮಂತ್ರಿಗಳೂ ಸಭಾ ಸದನದಲ್ಲಿದ್ದಾರೆ. ಪ್ರತಿಯೊಬ್ಬರೂ ಐದು ಸಾವಿರ ಹತ್ತು ಸಾವಿರ ರೂಪಾಯಿಗಳನ್ನು ಈ ಒಂದು "ಇಂದಿರಾ ವಿಕಾಸಪತ್ರ" ದಲ್ಲಿ ತೊಡಗಿಸುವುದರಿಂದ ರಾಜ್ಯಕ್ಕೆ ರಾಷ್ಟ್ರಕ್ಕೆ ಕೊಡುಗೆ ಕೊಟ್ಟ ಹಾಗೆ ಆಗುತ್ತದೆ ಎಂದು ಹೇಳುತ್ತಿದ್ದೇನೆ. ಎರಡನೇ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, ಅದೇನೆಂದರೆ ಈ ರಾಜ್ಯದ ಖೋತಾ ಬಜೆಟನ್ನು ಯಾವ ರೀತಿ ತುಂಬಿಸಲಿಕ್ಕೆ ನೀವು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಎಂದು ಕೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈಗ ಎಲ್ಲಾ ಸಂಘಸಂಸ್ಥೆಗಳ ಮೂಲಕ ಸಾರ್ವಜನಿಕರಲ್ಲಿ ಈ ಸಣ್ಣ ಉಳಿತಾಯದ ಯೋಜನೆ ರಾಷ್ಟ್ರದ ಉಳಿತಾಯದ ಯೋಜನೆ ಜನತಾ ಆಂದೋಳನದಿಂದ ಆಗಬೇಕು. ಈ ರೀತಿ ಹೆಚ್ಚಿಗೆ ಹಣವನ್ನು ಕೂಡಿಸುವುದರ ಮೂಲಕ ೮೭–೮೮ಕ್ಕೆ ಮಂದಿನ ಸಾರಿಗೆ ಈ ಸಣ್ಣ ಉಳಿತಾಯದಿಂದ ಕನಿಷ್ಟ ೨೨೦ ಕೋಟಿ ರೂಪಾಯಿಗಳ ಸಣ್ಣ ಸಂಗ್ರಹಣೆ ಮಾಡಬೇಕು ಎಂದು ನಿರ್ದಿಷ್ಟ ಗುರಿ ಕೊಟ್ಟಿದ್ದಾರೆ. ೨೨೦ ಕೋಟಿ ರೂಪಾಯಿಗಳ ೨೬೦–೨೮೦ ಕೋಟಿ ರೂಪಾಯಿ ಬರುವ ರೀತಿಯಲ್ಲಿ ನಾವು ಕಾರ್ಯಕ್ರಮವನ್ನು ಹಾಕಿಕೊಂಡು ಅದರಿಂದ ಬರುವ ೪೦–೫೦ ಕೋಟಿ ರೂಪಾಯಿಯಂನ್ನು ಈ ಖೋತಾ ಬಜೆಟನ್ನು ಇದರಿಂದ ತುಂಬಿಸಲಿಕ್ಕೆ ಆಗುತ್ತದೆ. ಆ ರೀತಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಂ.

ಶ್ರೀ ಜೆ. ರಾಜುಗೌಡ.—ಈಗ ತಾವು ೮೬–೮೭ ರಲ್ಲಿ ೩೨೫ ಕೋಟಿ ರೂಪಾಯಿಗಳ ನಿವ್ವಳ ಸಂಗ್ರಹಣೆಯನ್ನು ಮಾಡಿದ್ದೀರಿ. ಅದರಲ್ಲಿ ೨/೩ಭಾಗವೆಂದರೆ ೨೫೦ ಕೋಟಿ ರೂಪಾಯಿ ತಾವು ದೀರ್ಘಾವಧಿ ಸಾಲದ ರೂಪದಲ್ಲಿ ಕೊಡುತ್ತೀರಿ ಈ ದೀರ್ಘಾವಧಿ ಸಾಲವನ್ನು ಯಾವರೀತಿಯಾಗಿ ಮರು ಪಾವತಿ ಮಾಡುತ್ತೀರಿ ತಿಳಿಸುತ್ತೀರಾ?

ಶ್ರೀ ವೀರಣ್ಣ.—ಈ ಸಾಲವನ್ನು ೨೫ ವರ್ಷದ ಕಂತುಗಳಲ್ಲಿ ತೀರಿಸಬೇಕಾಗಿದೆ. ಮತ್ತು ಮೊದಲನೆಯ ಐದು ವರ್ಷ ಯಾವುದೇ ರೀತಿಯಾದ ರಿಕವರಿ ಇರುವುದಿಲ್ಲ. ೧೯೮೪–೮೫ರಲ್ಲಿ ಇದರ ಮೇಲೆ ಒಂಭತ್ತು ಪರ್‌ಸೆಂಟ್ ಬಡ್ಡಿ ಇತ್ತು ಆ ನಂತರ ಹತ್ತೂವರೆ ಪರ್‌ಸೆಂಟ್ ಬಡ್ಡಿಯಾಯಿತು. ಈಗ ೧೨ ಪರ್‌ಸೆಂಟ್ ಮಾಡಿದ್ದಾರೆ. ೨೫ ವರ್ಷ ಆದ ನಂತರ ಈ ಸಾಲವನ್ನು ಮರುಪಾವತಿ ಮಾಡಬೇಕಾಗಿದೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ : ೨೪೩ (೬೪೨) ಮಾನ್ಯಸದಸ್ಯರು ಗೈರುಹಾಜರಿ.

ಸಂಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಸಾರಿಗೆ ಸೌಲಭ್ಯಗಳಂ

೭೪೬ (ಬಿ) ಶ್ರೀ ಕೆ. ಕುಶಾಲ (ಸಂಳ್ಳ).— ಮಾನ್ಯ ಸಾರಿಗೆ, ಸಣ್ಣ ಉಳಿತಾಯಂ ಮತ್ತು ಬಂದೀಖಾನೆ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಶಾಲಾ ಕಾಲೇಜಂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸೆ ಬಸ್ಸುಗಳನ್ನು ಓಡಿಸುವಂತೆ ಕೇಳಿಕೊಳ್ಳಲಾಗಿತ್ತೆ ?

ಆ) ಸುಳ್ಯ ತಾಲ್ಲೂಕು ಕೇಂದ್ರದಿಂದ ಸೆಮಿ ಲಕ್ಸುರಿ ಬಸ್ ಮಂಜೂರಾಗಿದ್ದರೂ ಕಳೆದ ೩ ತಿಂಗಳಿಂದ ಬಸ್‌ನ್ನು ಹೊರಡಿಸದೆ ಡಿಪೋದಲ್ಲೇ ಇಟ್ಟಿರುವುದರ ಉದ್ದೇಶವೇನು ? ಈ ಬಸ್ಸನ್ನು ಯಾವಾಗ ಹೊರಡಿಸಲಾಗುವುದು ?

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷರು ಲಿಖಿತ ಆದೇಶ ನೀಡಿದರೂ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಟ್ರಾಫಿಕ್ ಡಿವಿಜನಲ್ ಕಂಟ್ರೋಲರು ಮತ್ತು ಸಹಾಯಕ ಸಾರಿಗೆ ಕಂಟ್ರೋಲರರು ಸದರಿ ಬಸ್ಸನ್ನು ಬಿಡುಗಡೆ ಮಾಡದಿರಲು ಕಾರಣವೇನು ?

ಈ) ಎನು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಹೌದು.

ಆ) ಸುಳ್ಯದಿಂದ ಅರೆ ಸುಖಾಸೀನ ವಾಹನವನ್ನು ಪ್ರಾರಂಭಿಸುವ ಬಗ್ಗೆ ಇದುವರೆಗೂ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

ಇ) ಪುತ್ತೂರಿನಿಂದ ಸುಳ್ಯ ಮಾರ್ಗವಾಗಿ ಬೆಂಗಳೂರಿಗೆ ಅರೆ ಸುಖಾಸೀನ ವಾಹನವನ್ನು ಓಡಿಸಲು ಸೂಕ್ತತೆಯನ್ನು ಪರಿಶೀಲಿಸುವಂತೆ ಮಾತ್ರ ನಿಗಮದ ಅಧ್ಯಕ್ಷರು ಸೂಚಿಸಿದ್ದಾರೆ.

ಈ) ಉಡುಪಿಯಿಂದ ಪುತ್ತೂರು ಸುಳ್ಯ ಮಾರ್ಗವಾಗಿ ಬೆಂಗಳೂರಿಗೆ ಓಡಿಸಲಾಗುತ್ತಿರುವ ಅರೆ ಸಂಖಾಸೀನ ವಾಹನದಲ್ಲಿ ಶೇಕಡ ೭೫ರಷ್ಟು ಕೂಡ ಪ್ರಯಾಣಿಕರು ಇರುವುದಿಲ್ಲವಾದ್ದರಿಂದ ಅರೆ ಸುಖಾಸೀನ ವಾಹನವನ್ನು ಪುತ್ತೂರಿನಿಂದ ಅಥವಾ ಸುಳ್ಯದಿಂದ ಬೆಂಗಳೂರಿಗೆ ಹೆಚ್ಚಿನ ಪ್ರಯಾಣಿಕರು ದೊರತನಂತರ ಓಡಿಸುವ ಬಗ್ಗೆ ಪರಿಗಣಿಸಲಾಗುವುದು.

ಶ್ರೀ ಕೆ. ಕುಶಾಲ.— ಮಾನ್ಯ ಅಧ್ಯಕ್ಷರೆ, ಸೂಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಅವರಿಗೆ ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳನ್ನು ಓಡಿಸಬೇಕೆಂದು ಮುಷ್ಕರ ಹೂಡಿದ್ದರೂ ಕೂಡ ಅದರ ಬಗ್ಗೆ ಇವರು ಏನೂ ಕಾರ್ಯಕ್ರಮ ತೆಗೆದು ಕೊಂಡಿಲ್ಲ. ಎರಡನೆಯದಾಗಿ ಸುಳ್ಯ ತಾಲ್ಲೂಕು ಕೇಂದ್ರದಿಂದ ಸೆಮಿ ಲಕ್ಷುರಿ ಬಸ್ ಮಂಜೂರಾಗಿದ್ದರೂ ಕಳೆದ ೩ ತಿಂಗಳಿಂದ ಬಸ್‌ನ್ನು ಹೊರಡಿಸದೆ ಆ ಬಸ್ ಡಿಪೋವಿನಲ್ಲಿ ತುಕ್ಕು ಹಿಡಿಯುತ್ತಾ ಇದೆ. ಏನಾದರೂ ಕೇಳಿದರೆ ಬಸ್ಸಿನಲ್ಲಿ ಓಡಾಡುವ ಪ್ರಯಾಣಿಕರ ಸಂಖ್ಯೆ ಅಷ್ಟು ಇಲ್ಲ ಎಂದು ಹೇಳುತ್ತಾರೆ. ದಯವಿಟ್ಟು ಕಾವು ಉಡುಪಿ ಬಸ್ಸಿಗೂ ಮತ್ತು ಇದಕ್ಕೂ ಸಂಬಂಧ ಕಲ್ಪಿಸಿದರೆ ಪ್ರಯೋಜನವಿಲ್ಲ. ತಾವು ಸೂಳ್ಯ ತಾಲ್ಲೂಕಿಗೆ ಕೇಂದ್ರದಿಂದ ಲಕ್ಷುರಿ ಬಸ್ ಮಂಜೂರಾಗಿರುವುದನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಪೂರ್ಣ ವಿವರಣೆಯನ್ನು ಕೊಟ್ಟರೆ ಪೂರ್ಣ ಮಾನ್ಯ ಅಧ್ಯಕ್ಷರು ಈ ವಿಚಾರದಲ್ಲಿ ಒಂದು ಅನುಪೂರಕ ಟಿಪ್ಪಣಿಯನ್ನು ಓದಲು ಅನುಮತಿ ಕೊಟ್ಟರೆ ಅರಿವಾಗಬಹುದು. ಓದುತ್ತೇನೆ. ಅದು ಈ ರೀತಿ ಇದೆ.

(ಅನುಪೂರಕ ಟಿಪ್ಪಣಿಗಳನ್ನು ಲಗತ್ತಿಸಲಾಗಿದೆ)

ಸೂಳ್ಯವು ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕು ಕೇಂದ್ರ. ೧೯೫೧ರ ಜನಗಣತಿಯ ಪ್ರಕಾರ ಸೂಳ್ಯದಲ್ಲಿ ೧೦,೩೯೪ ಜನಸಂಖ್ಯೆ ಇದ್ದು ಈ ತಾಲ್ಲೂಕಿನಲ್ಲಿ ೧೦೫,೩೮೫ ಜನಸಂಖ್ಯೆ ಇದೆ. ಪ್ರಯಾಣಿಕರ ಸಾರಿಗೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಕರಿಸಲಾಗಿದೆ. ಆದಾಗ್ಯೂ ಕೆಲವು ಮಾರ್ಗಗಳ ಭಾಗಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರತ್ಯೇಕವಾಗಿ ಸಂಚಾರಕ್ಕೆ ತೆಗೆದುಕೊಳ್ಳಲಾಗಿದೆ. ಸೂಳ್ಯವು ರಾಷ್ಟ್ರೀಕೃತ ರಸ್ತೆಯಾದ ಪುಡಿಕೇರಿ ಮತ್ತು ಮಂಗಳೂರು ಮಾರ್ಗದಲ್ಲಿದೆ. ಪುಡಿಕೇರಿ ಮಂಗಳೂರು ಮುಖ್ಯ ಮಾರ್ಗದ ಜೊತೆಗೆ ಮಂಗಳೂರು–ಹಾಸನ, ಮಂಗಳೂರು–ಧರ್ಮಸ್ಥಳ ಮಯಾ ಉಪ್ಪಿನಂಗಡಿ, ಮಂಗಳೂರು–ಸುಬ್ರಮಣ್ಯ ಮಯಾ ಬೆಳ್ತಂಗಡಿ ಮಾರ್ಗಗಳನ್ನು ಸಹಾ ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳ ಸಂಚಾರಕ್ಕೆ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸೂಳ್ಯ ತಾಲ್ಲೂಕಿನಲ್ಲಿ ವಾಹನ ಸಂಚಾರಕ್ಕೆ ಅನುಕೂಲವಿರುವಂತಹ ರಸ್ತೆ ಇರುವ ಹಳ್ಳಿಗಳಿಗೆ ಈಗ ಸಾಕಷ್ಟು ವಾಹನ ಸಂಚಾರವನ್ನು ಒದಗಿಸಿದೆ.

ಇದುವರೆಗೂ ರಸ್ತೆ ಇಲ್ಲದ ಕೆಲವು ಹಳ್ಳಿಗಳಿಗೆ ಈಗ ರಸ್ತೆ ಮಾಡುತ್ತಿದ್ದು, ರಸ್ತೆಯು ಪೂರ್ಣ ನಿರ್ಮಾಣವಾದ ನಂತರ ಈ ಹಳ್ಳಿಗಳಿಗೆ ವಾಹನ ಸಂಚಾರವನ್ನು ಒದಗಿಸಲಾಗುವುದು.

ಸೂಳ್ಯ ತಾಲ್ಲೂಕಿನಲ್ಲಿ ೪೦ ಹಳ್ಳಿಗಳಿದ್ದು ಈ ಹಳ್ಳಿಗಳಲ್ಲಿ ೬೭೭೦ರಿಂದ ೩೨೨೭ರವರೆಗೆ ಜನಸಂಖ್ಯೆಯನ್ನು ಪಡೆದಿರುತ್ತವೆ. ಈ ೪೦ ಹಳ್ಳಿಗಳ ಪೈಕಿ ಈ ಕೆಳಗೆ ತೋರಿಸಿರುವ ಹಳ್ಳಿಗಳಿಗೆ ವಾಹನ ಸಂಚಾರ ಕಲ್ಪಿಸಲಾಗಿದೆ.

೧)	ಸುಬ್ರಮ್ಮಣ್ಯ	೧೦)	ಮರಕುಂಜ	೧೯)	ತೋಡಿಕಾನ
೨)	ಸೂಳ್ಯ	೧೧)	ಉಬರಡಕ	೨೦)	ಬೆಳ್ಳಾರೆ
೩)	ಕೊಲಮಜಗರು	೧೨)	ಮಂಡೇಕೋಲು	೨೧)	ಗುತ್ತಿಗಾರ
೪)	ಅಲೆಟ್ಟಿ	೧೩)	ಮಡಪ್ಪಾದಿ	೨೨)	ಆರಂತೋಡು
೫)	ಅಜ್ಜಾವರ	೧೪)	ಆಮರಪಡನೂರು	೨೩)	ಸಂಪಾಜೆ
೬)	ಕನಕಮಜಲು	೧೫)	ಬಾಳಿಲಾ	೨೪)	ಹರಿಹರ ಪಲ್ಲಡ್ಕತಕ
೭)	ಐವರನಾಡು	೧೬)	ಬಸಪ	೨೫)	ಕಲ್ಲಮಡಕ
೮)	ಪೆರುವಾಜೆ	೧೭)	ಎಣಿಕ್ಲು	೨೬)	ಜಾಲ್ಸೂರು
೯)	ಕಲಮಾಕರ	೧೮)	ಬಳಗೋಡು	೨೭)	ಎಡಮಂಗಲ
				೨೮)	ಎನಮೂರು

ಉಳಿದ ಹಳ್ಳಿಗಳಿಗೆ ವಾಹನ ಸಂಚಾರಕ್ಕೆ ಅನುಕೂಲವಾದ ರಸ್ತೆಗಳಿರುವುದಿಲ್ಲ.

ಶ್ರೀ ಕುಶಾಲ, ಶಾಸಕರು ಪುತ್ತೂರಿನಿಂದ ಸೂಳ್ಯ ಮಾರ್ಗವಾಗಿ ಬೆಂಗಳೂರಿಗೆ ಅರೆಸುಖಾಸೀನ ವಾಹನವನ್ನು ಓಡಿಸುವ ಬಗ್ಗೆ ಕೇಳಿರುತ್ತಾರೆ. ನಿಗಮದ ಅಧ್ಯಕ್ಷರು ಸ್ವೀಕೃತ ಪತ್ರವನ್ನು ಶಾಸಕರಿಗೆ ಕಳುಹಿಸಿದ್ದು ಸೂಕ್ತ ಕ್ರಮ ತೆಗೆದುಕೊಳ್ಳುವಾ ಬಗ್ಗೆ ತಿಳಿಸಿರುತ್ತಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸೂಳ್ಯದ ಮೂಲಕ ಮೂರು ವೇಗದ ವಾಹನಗಳನ್ನು ಹಾಗೂ ಒಂದು ಅರೆಸೂಖಾಸೀನ ವಾಹನವನ್ನು ಓಡಿಸುತ್ತಿದೆ. ಈ ವಾಹನಗಳು ಸೂಳ್ಯದಿಂದ ಈ ಕೆಳಗೆ ತೋರಿಸಿರುವ ವೇಳೆಯಲ್ಲಿ ಬಿಡುತ್ತಿವೆ.

೧) ೦೮೪೫ (ಮಂಗಳೂರು–ಬೆಂಗಳೂರು ವೇಗದ ವಾಹನ)
೨) ೧೯೦೦ (ಮಂಗಳೂರು–ಬೆಂಗಳೂರು ವೇಗದ ವಾಹನ)
೩) ೨೨೧೫ (ಸುಬ್ರಮಣ್ಯ–ಬೆಂಗಳೂರು ವೇಗದ ವಾಹನ)
೪) ೨೩೧೫ (ಉಡುಪಿ–ಬೆಂಗಳೂರು ಆರಸುಖಾಸೀನ ವಾಹನ)

ಸೂಳ್ಯದಿಂದ ಬೆಂಗಳೂರಿಗೆ ಅಥವಾ ಬೆಂಗಳೂರು ಕಡೆಗೆ ಪ್ರತಿದಿನ ೫ ಪ್ರಯಾಣಿಕರಿಗಿಂತ ಹೆಚ್ಚಾಗಿ ಪ್ರಯಾಣ ಮಾಡುವುದಿಲ್ಲವೆಂದು ತಿಳಿದುಬಂದಿದೆ.

ಉಡುಪಿ–ಬೆಂಗಳೂರು ವಯಾ ಸೂಳ್ಯ ಅರೆಸುಖಾಸೀನ ವಾಹನದಲ್ಲಿನ ಪ್ರಯಾಣಿಕರ ಪರಿಮಿತಿಯನ್ನು (ಲೋಡ್ ಫ್ಯಾಕ್ಟರ್) ಈ ಕೆಳಗೆ ಕೊಡಲಾಗಿದೆ.

ಜನವರಿ	೧೯೮೬	ಶೇ ೫೧.೫
ಫೆಬ್ರವರಿ	,,	ಶೇ ೪೯.೪
ಮಾರ್ಚ್	,,	ಶೇ ೫೭.೬
ಏಪ್ರಿಲ್	,,	ಶೇ ೭೨.೮
ಮೇ	,,	ಶೇ ೮೪.೦
ಜೂನ್	,,	ಶೇ ೬೪.೦
ಆಕ್ಟೋಬರ್	,,	ಶೇ ೫೯.೦
ನವೆಂಬರ್	,,	ಶೇ ೬೬.೦
ಡಿಸೆಂಬರ್	,,	ಶೇ ೬೬.೦

(ಈ ವಾಹನವನ್ನು ಪ್ರಯಾಣಿಕರ ವಿರಳದಿಂದ ಜುಲೈ ತಿಂಗಳಿಂದ ಸೆಪ್ಟೆಂಬರ್ ೧೯೮೬ರವರೆಗೆ ನಿಲ್ಲಿಸಲಾಗಿತ್ತು.)

ಈ ಅರೆಸುಖಾಸೀನ ವಾಹನದಲ್ಲಿ ಸಾಕಷ್ಟು ಸ್ಥಳಾವಕಾಶವಿರುವುದು ಮೇಲೆ ತೋರಿಸಿರುವ ಪ್ರಯಾಣಿಕರ ಪರಿವಿಧಿ (ಲೋಡ ಫ್ಯಾಕ್ಟರ್)ನಿಂದ ತಿಳಿದುಬರುತ್ತದೆ ಹಾಗೂ ಸೂಳ್ಳದಿಂದ ಬೆಂಗಳೂರಿಗೆ ಪ್ರಯಾಣ ಮಾಡಲಿಚ್ಛಿಸುವ ಕೆಲವೇ ಪ್ರಯಾಣಿಕರು ಈ ಅರೆಸುಖಾಸೀನ ವಾಹನದಲ್ಲಿ ಪ್ರಯಾಣ ಮಾಡಬಹುದಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪುತ್ತೂರು–ಬೆಂಗಳೂರು ವಯಾ ಉಪ್ಪಿನಂಗಡಿ, ಶಿರಾಡಿ, ಸಕಲೇಶಪುರ ಹಾಸನ, ಚನ್ನರಾಯಪಟ್ಟಣ ಮತ್ತು ಕಣಿಗಲ್ ಮಾರ್ಗದಲ್ಲಿ ಅರೆಸುಖಾಸೀನ ವಾಹನಗಳನ್ನು ಓಡಿಸುತ್ತಿತ್ತು. ಈ ಅರೆಸುಖಾಸೀನ ವಾಹನಗಳ ಬದಲಿಗೆ ತಾ. ೨೩–೧೦–೧೯೮೬ರಿಂದ ಸುಖಾಸೀನ ವಾಹನಗಳನ್ನು ಓಡಿಸಲಾಗುತ್ತಿದೆ.

ಮಾನ್ಯ ಶಾಸಕರು ಪುತ್ತೂರು–ಬೆಂಗಳೂರು ಮಾರ್ಗದಲ್ಲಿ ತೆಗೆದುಕೊಳ್ಳಲಾಗಿರುವ ಅರೆಸುಖಾಸೀನ ವಾಹನಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ವಾಹನಗಳ ಪೈಕಿ ಒಂದು ವಾಹನವನ್ನು ಪುತ್ತೂರು–ಮಂಗಳೂರು–ಪಣಜಿ ಮಾರ್ಗದಲ್ಲಿ ಓಡಿಸಲಾಗುತ್ತಿದ್ದು ಇನ್ನೊಂದು ವಾಹನವನ್ನು ಕಾರ್ಯಾಗಾರದಲ್ಲಿ ಹೆಚ್ಚುವರಿಯಾಗಿ (ಸ್ಪೇರ್) ಇಟ್ಟುಕೊಳ್ಳಲಾಗಿದೆ.

ಸೂಳ್ಳದಿಂದ ಈಗ ಓಡಿಸಲಾಗುತ್ತಿರುವ ಅರೆಸುಖಾಸೀನ ವಾಹನಕ್ಕೆ ಸಾಕಷ್ಟು ಪ್ರಯಾಣಿಕರು ಇಲ್ಲದಿರುವುದರಿಂದ ಈ ವಾಹನವು ಮಂಕ್ಯಾಲಷ್ಟು ಕೂಡ ಭರ್ತಿಯಾಗಿ ಓಡುವುದಿಲ್ಲವಾದ್ದರಿಂದ ಪುತ್ತೂರಿನಿಂದ ಸೂಳ್ಳ ಮಾರ್ಗವಾಗಿ ಬೆಂಗಳೂರಿಗೆ ಮತ್ತೊಂದು ಅರೆಸುಖಾಸೀನ ವಾಹನವನ್ನು ಓಡಿಸುವುದು ಸಂಸ್ಥೆಯ ಆರ್ಥಿಕ ದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ. ಆದ್ದರಿಂದ ಈ ಮಾರ್ಗದಲ್ಲಿ ಪ್ರಯಾಣಿಕರ ಒತ್ತಡ ಕಂಡುಬಂದ ಮೇಲೆ ಅರೆಸುಖಾಸೀನ ವಾಹನವನ್ನು ಓಡಿಸುವ ಬಗ್ಗೆ ಪರಿಗಣಿಸಲಾಗುವುದು.

ಶ್ರೀ ಕೆ. ಕಂಶಾಲ.– ಮಾನ್ಯ ಅಧ್ಯಕ್ಷರೆ, ಉಡುಪಿ–ಬೆಂಗಳೂರು, ವೈ.ಸೂರು–ಬೆಂಗಳೂರು ಮತ್ತು ಮಂಗಳೂರು–ಬೆಂಗಳೂರು ಇಲ್ಲಿಗೆಲ್ಲಾ ಬಸ್ಸನ್ನು ಓಡಿಸುತ್ತಿದ್ದೀರಿ ಅಲ್ಲಿಗೂ ಇಲ್ಲಿಗೂ ಸಂಬಂಧವನ್ನು ದಯವಿಟ್ಟು ಕಲ್ಪಿಸಬೇಡಿ. ಸೂಳ್ಳ ತಾಲ್ಲೂಕಿಗೆ ಬಸ್ ಇಲ್ಲ. ದಯವಿಟ್ಟು ಕೊಡಿಸಿ ಕೊಡಿ ಎಂದು ಕೇಳುತ್ತೇನೆ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೆ, ಅನೇಕ ಬಸ್ಸುಗಳು ಸೂಳ್ಳ ಮೂಲಕ ಬೆಂಗಳೂರಿಗೆ ಬರುತ್ತಾ ಇವೆ. ಮಾನ್ಯ ಸದಸ್ಯರಿಗೆ ಹೇಳುವುದು ಇಷ್ಟೆ. ಒಂದು ವೇಳೆ ಅಲ್ಲಿ ಹೆಚ್ಚು ಪ್ರಯಾಣಿಕರು ಬಸ್ಸಿನಲ್ಲಿ ಓಡಾಡುವುದಾದರೆ ಆ ಮಾರ್ಗದಲ್ಲಿ ಪ್ರಯಾಣಿಕರ ಒತ್ತಡ ಕಂಡುಬಂದಮೇಲೆ ಅರೆಸುಖಾಸೀನ ವಾಹನವನ್ನು ಓಡಿಸುವ ಬಗ್ಗೆ ಪರಿಗಣಿಸಲಾಗುವುದು ಎಂದು ನಾನು ಆಗಲೇ ಉತ್ತರವನ್ನು ಹೇಳಿದ್ದೇನೆ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಕೆ. ಕಾಶಾಲ —ಸ್ವಾಮಿ. ಪ್ರಯಾಣಿಕರು ಇಲ್ಲದೇ ಹೋದರೆ ಮಾರನೆಯ ದಿವಸವೇ ಬಸ್ಸನ್ನು ನಿಲ್ಲಿಸಿಬಿಡಿ ಸ್ವಾಮಿ.

ಅಧ್ಯಕ್ಷರು.—ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ ಅಲ್ಲಿಗೆ ಇದು ಮುಕ್ತಾಯ ವಾಯಿತು ಬಿಟ್ಟುಬಿಡಿ.

ಸರಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿರುವ ಸ್ನಾತಕೊತರ ಪದವಿಯ ಸೀಟುಗಳು

೭೩೨. ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).—ಮಾನ್ಯ ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಎಲ್ಲಾ ಸರ್ಕಾರೀ ಹಾಗೂ ಖಾಸಗಿ ವೈದ್ಯಕೀಯ ವಿದ್ಯಾಲಯಗಳಲ್ಲಿ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಇರುವ ಸ್ಥಾನಗಳ ಒಟ್ಟು ಸಂಖ್ಯೆ ಎಷ್ಟು ?

ಆ) ೧೯೮೬ ಮತ್ತು ೧೯೮೭ನೇ ಸಾಲಿನಲ್ಲಿ ಸರ್ಕಾರವು ಸರ್ಕಾರೀ ಹಾಗೂ ಖಾಸಗಿ ವೈದ್ಯಕೀಯ ವಿದ್ಯಾಲಯಗಳಲ್ಲಿನ ಅರ್ಹತೆಯ ಆಧಾರದ ಮೇಲೆ ನೀಡಿರುವ ಸ್ಥಾನಗಳ ಸಂಖ್ಯೆ ಎಷ್ಟು?